ಕಾಯಿಗಳು ಮಳೆ ಅಥವಾ ಇಬ್ಬನಿಯಿಂದ ನೆನೆದು ಅದರ ಮೇಲೆ ಹೋಗಿ–ಬರುವ ದ್ವಿಚಕ್ರ ವಾಹನಗಳು ಜಾರಿದ್ದೂ ಉಂಟು. ಇಷ್ಟೆಲ್ಲಾ ಅವಘಡಗಳಾದರೂ ಆ ಮರ ಮಾತ್ರ ಇದಕ್ಕೂ ತನಗೂ ಸಂಬಂಧವಿಲ್ಲವೆಂಬಂತೆ ತನ್ನ ಪಾಡಿಗೆ ತಾನು ಅಡ್ಡಾದಿಡ್ಡಿ ಬೆಳೆಯುತ್ತಾ, ಕಸ ಉದುರಿಸುತ್ತಾ, ಸ್ಥಿತಪ್ರಜ್ಞನಂತೆ ನಿಂತೇ ಇತ್ತು.

ರಾಮಚಂದ್ರ ಶರ್ಮರು ತಮ್ಮ 'ಸಪ್ತಪದಿ' ಕವನ ಸಂಕಲನದಲ್ಲಿ ಈ ಮರದ ಬಗ್ಗೆ ಬರೆದಿರುವ 'ಮನೆಯೆದುರಿನ ಪಿಚಕಾರಿ ಮರ' ಎಂಬ ನಾಲ್ಕು ಸುನೀತಗಳಲ್ಲಿ 'ಕೊಂಬೆಗಳ ತುದಿಗೆ ತೆಪ್ಪಗಳೆತ್ತಿ ಹಿಡಿದಿದ್ದ ಪಿಚಕಾರಿ ಮರ' ಎಂದಿದ್ದಾರಲ್ಲದೆ, 'ಮಜಬೂತಾಗಿ ಬೆಳೆದು ಒಡೆದು ಹತ್ತು ದಿಕ್ಕಿಗೆ/ ಹರಡಿ ಆಮಿಷವೊಡ್ಡಿ ನೂರು ಥರದ ಹಕ್ಕಿಗೆ/ ದಿಕ್ಕಾಗಿ ಕೆಂಚಗಿನ ಗೊಂಚಲೇರಿಸಿ ಮುಡಿಗೆ/ ದಿನವಹೀ ಪುಷ್ಪಾರ್ಚನೆಯ ಮಾಡಿತ್ತು ಅಡಿಗೆ'– ಎಂದು ಈ ಮರದ ಇಂಚಿಂಚನ್ನೂ ವರ್ಣಿಸಿದ್ದಾರೆ. ಈ ಮರದ ಬಗ್ಗೆಯೂ ಕವನಗಳಿವೆ ಎಂದು ತಿಳಿದಾಗ ನನಗೆ ಪರಮಾಶ್ಚರ್ಯವಾಗಿತ್ತು! ಇದೇ ಸಮಯದಲ್ಲಿ ಕುವೆಂಪು ಅವರು ಬರೆದ 'ಹೀರೇಹೂ' ಕವನ ನೆನಪಿಗೆ ಬಂತು. ಸಾಮಾನ್ಯರಿಗೆ ಸಾಧಾರಣ ಎಂದು ಕಾಣಿಸುವ ವಸ್ತುಗಳು ಪ್ರತಿಭಾವಂತ ಕವಿಗಳಿಗೆ ವಿಶೇಷವಾಗಿ ಕಾಣುತ್ತವೆ.

ಗೂಗಲ್ ಗುರುವಿನ ಪ್ರಕಾರ ಬೆಂಗಳೂರಿನ ಅತ್ಯಂತ ಸುಂದರ ಹೂ ಬಿಡುವ ಮರಗಳಲ್ಲಿ ಇದೂ ಒಂದಂತೆ!! ಕಡು ಹಸಿರು ಎಲೆಗಳುಳ್ಳ ಮರದಲ್ಲಿ ಮುತ್ತುಗದ ಹೂವಿನಂತೆ ಕೆಂಪಾದ, ದೂರದಿಂದ ಬೆಂಕಿಯ ಜ್ವಾಲೆಯಂತೆ ಕಾಣುವ ಗೊಂಚಲಾಗಿರುವ ಹೂಗಳು! ಆದ್ದರಿಂದ ಇದನ್ನು 'ನಂದಿ ಫ್ಲೇಮ್' ಎನ್ನುತ್ತಾರೆ. ಇದರ ವೈಜ್ಞಾನಿಕ ಹೆಸರು ಸ್ಪಾಥೋಡಿಯಾ ಕ್ಯಾಂಪಾನುಲಾಟಾ (**Spathodea campanulata**). ಇದರ ಮೂಲ ಆಫ್ರಿಕಾ ದೇಶ. ಅಲ್ಲಿ ಇದು ಆಫ್ರಿಕನ್ ಟ್ಯುಲಿಪ್ ಟ್ರೀ ಎಂದು ಕರೆಯಲ್ಪಡುತ್ತದೆ. ಉದ್ಯಾನಗಳಲ್ಲಿ ಇದು ಪಕ್ಷಿಗಳನ್ನು ಆಕರ್ಷಿಸುವ ಮರ. ಎಳೆ ಕಾಯಿಗಳು ಹಸುರಾಗಿದ್ದು, ಒಣಗಿದಾಗ ಕಂದು ಬಣ್ಣವಾಗುವ ಕಾಯಿಗಳು ಕೆಳಗೆ ಉದುರಿ ಬೀಳುವಾಗ ಎರಡು ಹೋಳಾಗಿ ಬಿದ್ದು ದೋಣಿಯಂತೆ ಕಾಣುತ್ತವೆ. ಉದುರಿಬಿದ್ದ ಇದರ ಮೊಗ್ಗಿನಂತಹ ರಚನೆಯನ್ನು ಹಿಚುಕಿದರೆ 'ಚಿಳ್' ಎಂದು ಒಂದಷ್ಟು ದೂರದವರೆಗೆ ಹಾರುವ ನೀರು. ಹಾಗಾಗಿ ಇದನ್ನು 'ಉಚ್ಚೆಕಾಯಿ ಮರ' ಎಂದೂ ಹೇಳುತ್ತಾರೆ. ಮಕ್ಕಳಿಗೆ ಇದರ ನೀರನ್ನು ಹಾರಿಸುವುದೆಂದರೆ

